ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ನ ರಾ ಪುರ.

<u>Ex No.2/2018</u>

Rw.3

| | | |
|---|---|---|
| ಸಾಕ್ಷಿದಾರರ ಹೆಸರು | - | ದುಗ್ಗೇಶ್ ಬಿ.ಎಂ. |
| ತಂದೆಯ ಹೆಸರು | - | ಮೈಲಪ್ಪ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಆರ್.ಒ. |
| ವಾಸ ಸ್ಥಳ | - | ಹಾವೇರಿ |

ದಿನಾಂಕಃ 17.06.2023 ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ವಾದಿಯ ಪರ ಮಾನ್ಯ ಶ್ರೀ ಎಚ್ ಎ ಎಸ್ ವಕೀಲರಿಂದ:</u>

2013 ರಿಂದ 2022 ರವರೆಗೆ ನ.ರಾ. ಪುರ ಪಟ್ಟಣ ಪಂಚಾಯಿತಿಯಲ್ಲಿ ಕಂದಾಯ ನಿರೀಕ್ಷಕನಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ನನಗೆ ನ್ಯಾಯಾಲಯದಿಂದ ಸಾಕ್ಷ್ಯವನ್ನು ನುಡಿಯಲು ಸಮನ್ಸ್ ಬಂದಿರುತ್ತದೆ.

ನಿಪಿ-7 ಮಹಜರನ್ನು 2017 ರಲ್ಲಿ ನಾನೇ ಮಾಡಿರುತ್ತೇನೆ. ಸದ್ರಿ ಮಹಜರ್ ಹಾಜರಾಗಲು ಯಲ್ಲಮ್ಮ ಡಿಕ್ರಿದಾರರು ಮತ್ತು ಪ್ರವೀಣ್ ತೀರ್ಪುಋಣಿ ರವರಿಗೆ ಮುಂಚಿತವಾಗಿ ನೋಟೀಸ್ ನೀಡಿರುತ್ತೇನೆ. ಸದ್ರಿ ಮಹಜರ್ ಅನ್ನು ಯಲ್ಲಮ್ಮ ರವರ ಅರ್ಜಿ ಆಧಾರದ ಮೇಲೆ ಮಾಡಿರುತ್ತೇವೆ. ಸಾಕ್ಷಿ ಮಹಜರ್ ನೋಡಿ ಗುರುತಿಸಿದ್ದು ಮಹಜರ್ ಅನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿರುತ್ತದೆ. ಮಹಜರ್ ಕಾಲದಲ್ಲಿ ಸದ್ರಿ ಸ್ವತ್ತನ್ನು ಅಳತೆ ಮಾಡಿರುತ್ತೇವೆ. ಅಳತೆ ಮಾಡಿದಾಗ ಯಲ್ಲಮ್ಮ ರವರ ಸ್ವತ್ತು 45 x 80 ಅಡಿ ಕಂಡು ಬಂದಿರುತ್ತದೆ. ಪ್ರವೀಣ್ ರವರ ಸ್ವತ್ತು 16 x 80 ಅಡಿ ಕಂಡುಬಂದಿರುತ್ತದೆ. ಸದ್ರಿ ಪ್ರವೀಣ್ ಗೆ ಸೇರಿರುವ ಸ್ವತ್ತಿನಲ್ಲಿ ಅವರ ಮನೆ 8.9 x 16 ಅಡಿಯಲ್ಲಿ ಹಳೇ ಮನೆ ಇತ್ತು ಇನ್ನುಳಿದ ಜಾಗದಲ್ಲಿ ಅಂದರೆ 28 x 16 ಅಡಿಯಲ್ಲಿ ಹೊಸ ಮನೆ ಕಟ್ಟಿರುತ್ತಾರೆ. ನಾನು ಪರಿಶೀಲನೆ ಮಾಡಿದಾಗ ತೀರ್ಪುಋಣಿ ಸೆಟ್ ಬ್ಯಾಕ್ 1.6 ಅಡಿ ಬಿಟ್ಟು ಮನೆ ಕಟ್ಟಿರುತ್ತಾರೆ ಎಂದು ತಿಳಿದ

ಬಂದ ನಂತರ ಮಹಜರ್ ಮಾಡಿರುತ್ತೇನೆ. ಮಹಜರ್ ಸಮಯದಲ್ಲಿ ಸಾಕ್ಷಿದಾರರಾದ ಶ್ರೀನಾಥ್ ಹಾಗೂ ಪಟ್ಟಣ ಪಂಚಾಯಿತಿ ಸದಸ್ಯರು ಶ್ರೀಮತಿ ಆಶಾ ಶ್ರೀನಾಥ್ ಹಾಜರಿದ್ದರು. ಸದ್ರಿ ಮಹಜರ್ ಗೆ ಯಲ್ಲಮ್ಮ ಪರವಾಗಿ ಅವರ ಮಗ ರಜನೀಶ್ ಸಹಿ ಮಾಡಿರುತ್ತಾನೆ. ಸದ್ರಿ ಮಹಜರ್ ಗೆ ತೀರ್ಪುಋಣಿ ಸಹ ಸಹಿ ಮಾಡಿರುತ್ತಾನೆ. ನನ್ನ ಪ್ರಕಾರ ನಾನು ಹಾಜರು ಮಾಡುವ ಕಾಲದಲ್ಲಿ ತೀರ್ಪು ಋಣಿ ಸೆಟ್ ಬ್ಯಾಕ್ ಬಿಟ್ಟು ಮನೆ ಕಟ್ಟಿರುತ್ತಾನೆ ಎಂದು ತಿಳಿದು ಬಂದಿರುತ್ತದೆ.

ಪಾಟೀ ಸವಾಲುಃ 5.30 ಗಂಟೆಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.

ಸಾಕ್ಷಿಯನ್ನು ಕರೆಸಿ ಪುನಃ ಪ್ರಮಾಣ ವಚನ ಬೊಧಿಸಲಾಯಿತು.

Sri KSS Called out, BHR called out not present. Hence Cross of RW-3 taken as nil.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ ರಾ ಪುರ.